2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.212/2025

ಪಿ.ಡಬ್ಲ್ಯೂ: 5

ಸಿ.ಡಬ್ಲ್ಯೂ: 14

ಸಾಕ್ಷಿಯ ಹೆಸರು: ಶ್ರೀ. ಸುನೀಲ ದಾಕಲು ರಾಕ್ಷೆ
ತಂದೆಯ ಹೆಸರು: ದಾಕಲು ರಾಕ್ಷೆ
ವಯಸ್ಸು: 60 ವರ್ಷ
ಉದ್ಯೋಗ: ಗುತ್ತಿಗೆದಾರರು
ವಾಸ: ಅಂಬೇವಾಡಿ, ಬೆಳಗಾವಿ

**ದಿನಾಂಕ: 23.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

1. 2025 ರಲ್ಲಿ ಚಾಸಾ–13 ರವರು ಸುಳಗಾದಲ್ಲಿರುವ ತಮ್ಮ ಜಮೀನಿನ ಸರ್ವೇ ನಂ:55 ರಲ್ಲಿ ಬಡಾವಣೆ ನಿರ್ಮಿಸುತ್ತಿದ್ದರು. ನನಗೆ ರಸ್ತೆ ಹಾಗೂ ಚರಂಡಿ ನಿರ್ಮಿಸುವ ಕಾಮಗಾರಿಯ ಗುತ್ತಿಗೆಯನ್ನು ನೀಡಿದ್ದರು. ಒಮ್ಮೆ ನಾನು ಸರ್ದಾರ ಮೈದಾನದಲ್ಲಿ ಕ್ರಿಕೆಟ್ ನೋಡಲು ಹೋಗಿದ್ದೆ, ಅಲ್ಲಿಗೆ ದೃಶ್ಯ ಮಾಧ್ಯಮದ ಮೂಲಕ ಹಾಜರಾಗಿರುವ ಆರೋಪಿ ಪ್ರಭಾಕರ ಬಂದು ನಾನು ಗೌಂಡಿ ಕೆಲಸ ಮಾಡುತ್ತೇನೆ ನಿಮ್ಮಲ್ಲಿ ಕೆಲಸವಿದ್ದರೆ ಕೊಡಿ ಎಂದು ಕೇಳಿದ. ಅದಕ್ಕೆ ನಾನು ನಮ್ಮದು ಒಂದು ಕೆಲಸ ನಡೆಯುತ್ತಿದೆ ಕೆಲಸಕ್ಕೆ ಬಾ ಎಂದು ಹೇಳಿದೆ. ಅದಕ್ಕೆ ಆತ ನನ್ನ ಫೋನ್ ನಂಬರ ತೆಗೆದುಕೊಂಡು ಹೋಗಿದ್ದ. ನನ್ನನ್ನು ಭೇಟಿಯಾಗಿ 15 ದಿನಗಳ ನಂತರ ಆತ ನನಗೆ ಕರೆ ಮಾಡಿ ಕೆಲಸಕ್ಕೆ ನಾವು ಮೂರು ಜನರು ಬರುತ್ತಿದ್ದೇವೆ, ಆದರೆ ಬಸ್ಸ ಚಾರ್ಜಗಾಗಿ ರೂ. 300/– ಗಳನ್ನು ಫೋನ್ ಪೇ ಮಾಡಿ ಎಂದು ಒಂದು ಫೋನ ನಂಬರ ಹೇಳಿದ ಅದಕ್ಕೆ ನಾನು ರೂ.300/– ಗಳನ್ನು ಕಳುಹಿಸಿಕೊಟ್ಟೆ ನಂತರ ಜೂನ್ 04, 2025 ರಲ್ಲಿ ಆರೋಪಿ ತನ್ನ ಮಗನನ್ನು ಹಾಗೂ ಮೃತ ಕುಬೇರ ಹಾಗೂ ಮತ್ತೊಬ್ಬನನ್ನು ಕರೆದುಕೊಂಡು ಬಂದ. ನನ್ನ ಬಳಿ ಅವರು 8 ದಿನಗಳ ಕಾಲ ಕೆಲಸ ಮಾಡಿದರು. ಬಂದಿದ್ದವರು ನಾವು ಕೆಲಸ ಮುಗಿಸಿ ಮನೆಗೆ ಹೋಗಿ ಬರಲು ತೊಂದರೆಯಾಗುತ್ತದೆ ಎಂದು ಹೇಳಿದ್ದರಿಂದ ಬಡಾವಣೆ ನಿರ್ಮಾಣ ಜಾಗದಲ್ಲಿ ಸಿಮೆಂಟ್ ಸಂಗ್ರಹಿಸಲು ಕಟ್ಟಿದ್ದ ಶೆಡ್ ನಲ್ಲಿ ಉಳಿದುಕೊಳ್ಳುತ್ತೇವೆ ಎಂದು ಹೇಳಿದರು. ಅದರಂತೆ ಅವರಿಗೆ

ಉಳಿದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದೆ. ಅಲ್ಲಿಯೇ ಅಡುಗೆ ಮಾಡಿಕೊಳ್ಳಲು ನಾನೇ ಪಾತ್ರೆಗಳನ್ನು ಹಾಗೂ ಅಡುಗೆ ಸಾಮಾನುಗಳನ್ನು ಕೊಡಿಸಿದ್ದೆ. ಅದರಂತೆ ಕೆಲಸ ಮಾಡಿ ಅಲ್ಲಿಯೇ ಅಡುಗೆ ಮಾಡಿಕೊಂಡು ಊಟ ಮಾಡಿ ಮಲಗಿಕೊಳ್ಳುತ್ತಿದ್ದರು.

2. ದಿಃ12.06.2025 ರಂದು ಸಾಯಂಕಾಲ 05.00 ಗಂಟೆಗೆ ಆರೋಪಿಯು ಸಂತೆಯಿಂದ ಸಾಮಾನುಗಳನ್ನು ತರಬೇಕು ಅದಕ್ಕಾಗಿ ರೂ.2,000/– ಕೊಡಿ ಎಂದು ಕೇಳಿದ, ಅದರಂತೆ ನಾನು ಕೊಟ್ಟೆ ಆ ದಿನ ಕೆಲಸವನ್ನು 06.00 ಗಂಟೆಗೆ ನಿಲ್ಲಿಸಿದರು. ಆ ನಂತರ ನಾನು ಮನೆ ಕಡೆಗೆ ಹೊರಟೆ. ಮರುದಿನ ಬೆಳಗ್ಗೆ 08.00 ಗಂಟೆಗೆ ನನಗೆ ಚಾಸಾ–13 ರವರು ಕರೆ ಮಾಡಿ ಕೆಲಸ ಮಾಡಲು ಬಂದಿದ್ದವರಲ್ಲಿ ಒಬ್ಬನ ಕೊಲೆಯಾಗಿದೆ ಎಂದು ತಿಳಿಸಿದರು. ಅದಕ್ಕೆ ನಾನು 09.00 ಗಂಟೆಗೆ ಅಲ್ಲಿಗೆ ಹೋದೆ. ಅಲ್ಲಿ ಕುಬೇರನ ಶವ ಬಿದ್ದಿತ್ತು. ಆ ಕಾಲಕ್ಕೆ ಆರೋಪಿ, ಆತನ ಮಗ ಹಾಗೂ ಮತ್ತೊಬ್ಬ ಅಲ್ಲಿ ಇರಲಿಲ್ಲ. ಆರೋಪಿಯ ಬಳಿ ಫೋನ್ ಇತ್ತು, ಅದಕ್ಕೆ ಕರೆ ಮಾಡಿದಾಗ ಆತ ಅದನ್ನು ಬಂದ್ ಮಾಡಿದ್ದ. ಮತ್ತೊಬ್ಬನ ಬಳಿ ಮೊಬೈಲ್ ಫೋನ ಇರಲಿಲ್ಲ. ನಾನು ಹೋದ ಕಾಲಕ್ಕೆ ಮೃತನ ಶವದ ಮೇಲೆ ಬಟ್ಟೆ ಮುಚ್ಚಿದ್ದರು. ಶವವು ಶೆಡ್ ಪಕ್ಕದಲ್ಲಿಯೇ ಬಿದ್ದಿತ್ತು, ಶವದ ಮುಖದ ಮೇಲಿದ್ದ ಬಟ್ಟೆಯನ್ನು ಸರಿಸಿ ನೋಡಿದಾಗ ಮುಖದ ಮೇಲೆ ಗಾಯಗಳಾಗಿದ್ದವು.

3. ನಂತರ ಪೋಲಿಸರು ಬಂದು ಪಂಚನಾಮೆಯನ್ನು ಮಾಡಿರುತ್ತಾರೆ. ಆದರೆ ಕೊಲೆಯನ್ನು ಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆದರೆ ನಂತರ ಕೊಲೆಯನ್ನು ಆರೋಪಿ ಪ್ರಭಾಕರ ಮಾಡಿದ್ದಾನೆ ಎಂದು ತಿಳಿಯಿತು. ಸಾಕ್ಷಿಯು ಮುಂದುವರೆದು, ಆ ದಿನ ರಾತ್ರಿ ಮೂರು ಜನ ಶೆಡ್ ನಲ್ಲಿ ಪಾರ್ಟಿ ಮಾಡಿದ್ದು, ಆ ನಂತರ ಮೃತನು ಶೆಡ್ ನಲ್ಲಿ ಮೂತ್ರ ಮಾಡಿದ್ದರಿಂದ ಆರೋಪಿ ಹಾಗೂ ಮತ್ತೊಬ್ಬ ಮೃತನ ಜೊತೆ ಜಗಳ ಮಾಡಿ, ಕಟ್ಟಿಗೆಯಿಂದ ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆ ಎಂದು ತಿಳಿಯಿತು. ಸಾಕ್ಷಿಯು ಆರೋಪಿಯನ್ನು ಮತ್ತೋಮ್ಮೆ ಗುರುತಿಸಿ ಇವನೇ ಪ್ರಭಾಕರ ಗಾಡಿವಡ್ಡರ ಎಂದು ಹೇಳುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಎಲ್.ಎಂ.ಎಚ್. ವಕೀಲರಿಂದಃ**

4. ನಾನು ಗುತ್ತಿಗೆದಾರ ಎಂದು ತೋರಿಸಲು ನನ್ನ ಬಳಿ ಪ್ರಮಾಣ ಪತ್ರ ಇದೆ. ಆದರೆ ಅದನ್ನು ಪೋಲಿಸರಿಗೆ ಕೊಟ್ಟಿರುವುದಿಲ್ಲ. ಚಾಸಾ–13 ರವರ ಬಡಾವಣೆಯಲ್ಲಿ ಗುತ್ತಿಗೆ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ಕರಾರು ಪತ್ರವನ್ನು ನಾನು ತನಿಖಾಧಿಕಾರಿಗೆ ನೀಡಿರುವುದಿಲ್ಲ. ನಾನೇನು ಭೂ ಪರಿವರ್ತನೆ ಆದೇಶ ಹಾಗೂ ನಕ್ಷೆ ಮಂಜೂರಾತಿ ದಾಖಲಾತಿಗಳನ್ನು ನೋಡಿರುವುದಿಲ್ಲ.

ಆರೋಪಿಯು ಮೇ 2025 ರಲ್ಲಿ ಕ್ರಿಕೆಟ್ ಮೈದಾನದಲ್ಲಿ ಭೇಟಿಯಾಗಿದ್ದ, ಆದರೆ ನಿಖರ ದಿನಾಂಕ ನೆನಪಿಲ್ಲ. ಆರೋಪಿಗೆ ನಾನು ರೂ.300/– ಮಾಡಿದ್ದ ಫೋನ್ ನಂಬರನ್ನು ಈಗ ನನಗೆ ಹೇಳಲು ಬರುವುದಿಲ್ಲ. ಆರೋಪಿಗೆ ನಾನು ಜೂನ್ 4 ಅಥವಾ 5 ರಂದು ಹಣ ಕಳುಹಿಸಿದ್ದೆ. ಆ ದಿನವೇ ಕೆಲಸಕ್ಕೆ ಬಂದಿದ್ದರು. ನಾನು ಫೋನ್ ಪೇ ಮಾಡಿದ ಫೋನ್ ನಂಬರ ಹಾಗೂ ಖಾತೆಯ ವಿವರಗಳನ್ನು ಪೋಲಿಸರಿಗೆ ನೀಡಿರುವುದಿಲ್ಲ. ಆ ರೀತಿ ವಿವರಗಳನ್ನು ಪೋಲಿಸರಿಗೆ ಕೊಡಲು ನನಗೇನು ತೊಂದರೆಯಿರಲಿಲ್ಲ. ಬಂದ ಕೆಲಸಗಾರರ ಬಳಿ ನಾನೇನು ಆಧಾರ ಕಾರ್ಡನ್ನು ಪಡೆದುಕೊಂಡಿರಲಿಲ್ಲ. ಆದರೆ ಆರೋಪಿತನು ನಾವೆಲ್ಲರೂ ವಡ್ಡರವಾಡಿಯಲ್ಲಿರುತ್ತೇವೆ ಎಂದು ಹೇಳಿದ್ದ. ಆರೋಪಿಯನ್ನು ನಾನು ಕ್ರಿಕ್ರೆಟ್ ಮೈದಾನದಲ್ಲಿ ಭೇಟಿಯಾಗಿದ್ದೆ, ಆತ ಕೆಲಸಕ್ಕೆ ಬರುತ್ತೇನೆ ಎಂದು ಹೇಳಿ ನನ್ನ ಫೋನ್ ನಂಬರ ತೆಗೆದುಕೊಂಡಿದ್ದ ಆದಾದ 15 ದಿನಗಳ ನಂತರ ಕರೆ ಮಾಡಿ ಫೋನ್ ಪೇ ಮೂಲಕ ರೂ. 300/– ಪಡೆದು ಅವನ ಮಗ ಹಾಗೂ ಇನ್ನಿಬ್ಬರನ್ನು ಕೆಲಸಕ್ಕೆ ಕರೆದುಕೊಂಡು ಬಂದಿದ್ದ ಎಂದು ಪೋಲಿಸರು ಹೇಳಿಕೊಟ್ಟಿದ್ದರಿಂದ ಈಗ ನಾನು ನ್ಯಾಯಾಲಯದಲ್ಲಿ ಹೇಳಿರುತ್ತೇನೆ ಎನ್ನುವುದು ಸರಿಯಲ್ಲ. ಮೃತನು ಎಲ್ಲಿ ಎಲ್ಲಿ ಸಾರಾಯಿ ಕುಡಿಯುತ್ತಿದ್ದ ಎಂದು ನನಗೇನು ಗೊತ್ತಿಲ್ಲ. ಅದೇರೀತಿ ಆತ ಎಲ್ಲಿ ಹೋಗಿ ತೀರುಗಾಡಿಕೊಂಡು ಬರುತ್ತಿದ್ದ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋಗುವ ಮುನ್ನ ಪೋಲಿಸರಿಗೆ ಕರೆ ಮಾಡಿ ಮಾಹಿತಿ ತಿಳಿಸಿರಲಿಲ್ಲ. ಅಲ್ಲಿ ಪಾರ್ಟಿ ಮಾಡಿದ್ದ ಬಗ್ಗೆ ಮದ್ಯಪಾನದ ಪ್ಯಾಕೇಟಗಳು, ಅಡುಗೆ ಮಾಡಿದ ಪಾತ್ರೆಗಳು ಅಲ್ಲಿಯೇ ಇದ್ದವು. ಸಾಕ್ಷಿ ಹೇಳುತ್ತಾರೆ ಶೆಡ್ ನ ಪಕ್ಕದಲ್ಲಿ ಒಂದು ಪತ್ರಾಸನ ಶೆಡನಲ್ಲಿ ಅಡುಗೆ ಮಾಡಿ ಪಾರ್ಟಿ ಮಾಡಿದ್ದರು ಎಂದು ಹೇಳುತ್ತಾರೆ. ಈ ವಿಚಾರವನ್ನು ನಾನು ಪೋಲಿಸರ ಮುಂದೆ ಹೇಳಿರುವುದಿಲ್ಲ. ಘಟನಾ ಸ್ಥಳದಲ್ಲಿ ಒಟ್ಟು ಎರಡು ಶೆಡ್ ಗಳಿವೆ. ಒಂದು ಕೇವಲ ಶೀಟ್ ಮೂಲಕ ತಯಾರು ಮಾಡಿರುವ ಶೆಡ್ , ಇಟ್ಟಿಗೆಯಿಂದ ಕಟ್ಟಿದ ಶೆಡ್ ನಿಂದ ಸುಮಾರು 100 ಅಡಿ ದೂರದಲ್ಲಿದೆ.

ಪ್ರಶ್ನೆಃ ಶೆಡ್ ನಲ್ಲಿದ್ದವರು ಪಾರ್ಟಿ ಮಾಡಿ ಅಲ್ಲಿ ಮೃತನು ಮೂತ್ರ ಮಾಡಿದ್ದು, ಜಗಳವಾಗಿ ಆರೋಪಿ 1 ಹಾಗೂ ಇನ್ನೊಬ್ಬ ಮೃತನಿಗೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದಾರೆ ಎಂದು ನಿನಗೆ ಹೇಗೆ ತಿಳಿಯಿತು?

ಉತ್ತರಃ ಪೋಲಿಸರು ಆರೋಪಿಯನ್ನು ಹಿಡಿದುತಂದು ವಿಚಾರಣೆ ಮಾಡಿದಾಗ ಪೋಲಿಸ ಠಾಣೆಯಲ್ಲಿ ಆತನೇ ಹೇಳಿದ್ದರಿಂದ ತಿಳಿದಿರುತ್ತದೆ.

5. ಅಲ್ಲಿ ಪಾರ್ಟಿ ಮಾಡಿದ್ದ ಜಾಗದಿಂದ ಪೋಲಿಸರು ಯಾವುದೇ ವಸ್ತುಗಳನ್ನು ಜಪ್ತು ಮಾಡಿರುವುದಿಲ್ಲ.

6. ಶವ ಬಿದ್ದಿದ್ದು, ಕೊಲೆಯನ್ನು ಆರೋಪಿ ಮಾಡಿದ್ದಾನೆ ಎಂದು ಪೋಲಿಸರು ಹೇಳಿದ್ದರಿಂದ ತಿಳಿಯಿತು ಎನ್ನುವುದು ಸರಿ. ಶವದ ಮೇಲೆ ಗಾಯಾಗಳಾಗಿದ್ದವು ಎಂಬ ವಿಚಾರವನ್ನು ಪೋಲಿಸರು ಹೇಳಿದ್ದರಿಂದ ತಿಳಿಯಿತು ಎನ್ನುವುದು ಸರಿಯಲ್ಲ. ಆರೋಪಿಯ ಫೋನ್ ನಂಬರನ್ನು ಹೇಳಲು ಬರುತ್ತದೆ ಎಂದರೆ ಅದು ನನ್ನ ನೆನಪಿನಲ್ಲಿ ಇಲ್ಲ, ಆದರೆ ಮೊಬೈಲ್ ಫೋನನಲ್ಲಿ ಇದೆ ತೆಗೆದು ಹೇಳುತ್ತೇನೆ. ಆರೋಪಿ ಹಾಗೂ ಮತ್ತೊಬ್ಬ ಅಲ್ಲಿಂದ ಕಾಣೆಯಾಗಿದ್ದಾರೆ, ಆರೋಪಿಗೆ ನಾನು ಕರೆ ಮಾಡಿದಾಗ ಆತನ ನಂಬರ ಬಂದ್ ಆಗಿದೆ ಎಂದು ಹೇಳಿ ಆರೋಪಿಯ ಫೋನ್ ನಂಬರನ್ನು ಪೋಲಿಸರಿಗೆ ಕೊಟ್ಟಿದ್ದೀಯಾ ಎಂದರೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಪೋಲಿಸ ಠಾಣೆಗೆ ನಾನು ಹೋಗಿದ್ದ ದಿನಾಂಕವನ್ನು ಹೇಳಲು ಬರುವುದಿಲ್ಲ. ಆದರೆ ಘಟನೆಯಾದ 4 ದಿನಗಳ ನಂತರ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದಿದ್ದರು, ಆತನನ್ನು ಗುರುತಿಸಲು ಪೋಲಿಸರು ಕರೆಸಿದ್ದರು. ಆರೋಪಿಯನ್ನು ಪೋಲಿಸ ಠಾಣೆಗೆ ಕರೆದುಕೊಂಡ ಬಂದ ದಿನಾಂಕ ನನಗೆ ಗೊತ್ತಿಲ್ಲ. ಘಟನೆಯಾದ 4 ದಿನದ ನಂತರ ಆರೋಪಿಯನ್ನು ಪೋಲಿಸ ಠಾಣೆಗೆ ಕರೆದು ತಂದಿರಲಿಲ್ಲ, ನಾನು ಅಲ್ಲಿಗೆ ಹೋಗಿರಲಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ನಾನು ಹೋಗಿ ಆತನನ್ನು ಅಲ್ಲಿ ನೋಡಿರುತ್ತೇನೆ. ಆರೋಪಿ ಮೃತ ಕುಬೇರನನ್ನು ನನ್ನ ಬಳಿ ಕೆಲಸಕ್ಕೆ ಕರೆದು ತಂದಿರಲಿಲ್ಲ, ಕುಬೇರನ ಕೊಲೆಗೆ ಆರೋಪಿ ಕಾರಣನಲ್ಲ, ಪೋಲಿಸರ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿ ಹಾಗೂ ಇನ್ನಿಬ್ಬರು ಪಾರ್ಟಿ ಮಾಡಿ ಮಲಗುವ ಜಾಗದಲ್ಲಿ ಮೃತನು ಮೂತ್ರ ಮಾಡಿದ್ದರಿಂದ ತಂಟೆಯಾಗಿ ಆರೋಪಿ ಹಾಗೂ ಮತ್ತೊಬ್ಬ ಸೇರಿ ಕುಬೇರನನ್ನು ಹೊಡೆದು ಸಾಯಿಸಿದ್ದಾರೆ ಎಂದು ಪೋಲಿಸರಿಂದ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ನಾನು ಪೋಲಿಸರ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ. ಮೃತನು ಎಲ್ಲೆಯೋ ಸಾರಾಯಿ ಕುಡಿದು ಬಿದ್ದು ಮೃತ ಹೊಂದಿದ್ದು ಅದನ್ನು ಕೊಲೆ ಎಂದು, ಅದಕ್ಕೆ ಆರೋಪಿ ಕಾರಣನೆಂದು ಪೋಲಿಸರ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದರೆ ಸರಿಯಲ್ಲ. ಮೃತನು ಹೇಗೆ ಸತ್ತ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

**ಓ ಹೇ ಕೇ ಸರಿ ಇದೆ.**

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.